# ಸ್ವಾಮಿ ಅಖಂಡಾನಂದರ ಜನಸೇವಾದರ್ಶ

ಸ್ವಾಮಿ ಹೃದಾನಂದ



## ಪರಮಪುರುಷನ ಬೆಳಕು

**ಅ**ವತಾರಪುರುಷರು ತಮ್ಮ ಅದ್ಭುತ ಲೀಲೆಗಳಿಂದ ಅಧರ್ಮವನ್ನು ನಾಶಗೊಳಿಸಿ, ತುಕ್ಕುಹಿಡಿದ ಹಳೆಯ ತತ್ತ್ವಗಳನ್ನು ನವೀಕರಿಸಿ ಧರ್ಮದ ಬೆಳಕನ್ನು ಎಲ್ಲೆಡೆ ಪಸರಿಸುತ್ತಾರೆ. ಶ್ರೀರಾಮಕೃಷ್ಣ ಅವತಾರದಲ್ಲಿ ಪ್ರಕಾಶಗೊಂಡ ಧರ್ಮದ ಹೊಸ ಜ್ಯೋತಿಯು ಯಾವುದು? ಅವರು ಹೇಗೆ ಧರ್ಮದ ಅಭ್ಯುತ್ಥಾನವನ್ನು ಉಂಟು ಮಾಡಿದರು? **ಆಚಾರಃ ಪ್ರಭವೋ ಧರ್ಮಃ** – ನಡವಳಿಕೆಗಳಿಗೆ ಧರ್ಮವೇ ಮೂಲ ಎಂಬುದು ಸೂಕ್ತಿ. ಈ ಬಗ್ಗೆ ಶ್ರೀರಾಮಕೃಷ್ಣರು ಬೋಧಿಸಿದ ಕಾರ್ಯಪ್ರಣಾಳಿಯಾದರೂ ಯಾವುದು? – ಈ ಪ್ರಶ್ನೆಗಳಿಗೆ ದಕ್ಷಿಣೇಶ್ವರದ ಶ್ರೀರಾಮಕೃಷ್ಣರ ಕೊಠಡಿಯಲ್ಲಿ ನಡೆದ ಒಂದು ಸನ್ನಿವೇಶದ ಮೂಲಕ ನಾವು ಉತ್ತರವನ್ನು ಪಡೆಯಬಹುದು.

> ಪೂಜ್ಯ ಸ್ವಾಮೀಜಿಯವರು ಅನೇಕಲ್ ತಾಲೋಕಿನ ಶಿವನಹಳ್ಳಿಯಲ್ಲಿರುವ ರಾಮಕೃಷ್ಣ ಮಿಷನ್ನಿನ ಆಶ್ರಮದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಇವರು ಉತ್ತಮ ವಾಗ್ಮಿಗಳು ಮತ್ತು ಬರಹಗಾರರು.

ಒಂದು ದಿನ ಶ್ರೀರಾಮಕೃಷ್ಣರ ಕೋಣೆಯಲ್ಲಿ ವೈಷ್ಣವಭಕ್ತರ ಸಮಾಗಮವಾಗಿತ್ತು. ವೈಷ್ಣವ ಧರ್ಮದ ಪ್ರಧಾನ ತತ್ತ್ವಗಳಾದ **ಭಗವಂತನ ನಾಮದಲ್ಲಿ ರುಚಿ, ಜೀವಿಗಳಲ್ಲಿ ದಯೆ ಮತ್ತು ಭಕ್ತರ ಸೇವೆ** – ಇವುಗಳ ಬಗ್ಗೆ ಚರ್ಚಿಸುತ್ತಾ ಶ್ರೀರಾಮಕೃಷ್ಣರು 'ದಯೆ' ಎಂಬ ಪದವನ್ನು ಉಚ್ಚರಿಸುತ್ತ ಸಮಾಧಿಯನ್ನು ಹೊಂದಿದರು. ಸ್ವಲ್ಪ ಹೊತ್ತಿನ ನಂತರ ಸಾಮಾನ್ಯ ಸ್ಥಿತಿಗೆ ಹಿಂದಿರುಗಿ, "ದಯೆಯ ಬಗ್ಗೆ ಮಾತನಾಡುವುದು ಎಂತಹ ಮೂರ್ಖತನ! ಮನುಷ್ಯ ಒಂದು ಕೀಟಾಣುಕೀಟ. ಅವನು ಇತರರಿಗೆ ದಯೆ ತೋರುವುದೇ? ದಯೆ ಅಲ್ಲವೇ ಅಲ್ಲ. ಎಲ್ಲಾ ಜೀವಿಗಳಿಗೂ ಸೇವೆ ಎನ್ನಬೇಕು. ಎಲ್ಲಾ ಜೀವಿಗಳು ಭಗವಂತನ ಆವಿರ್ಭಾವಗಳೆಂದು ತಿಳಿದು ಅವುಗಳಿಗೆ ಸೇವೆ ಮಾಡಬೇಕು" ಎಂದು ಹೇಳಿದರು. ಅಂದಿನ ಸಮಾವೇಶದಲ್ಲಿ ನರೇಂದ್ರನೂ ಇದ್ದ. ಕೊಠಡಿಯಿಂದ ಹೊರಗೆ ಬಂದವನೇ ಅವನು ಹೇಳಿದ, "ಶ್ರೀರಾಮಕೃಷ್ಣರ ಮಾತುಗಳಲ್ಲಿ ನಾನು ಇಂದು ಅದ್ಭುತ ಬೆಳಕನ್ನು ಕಂಡೆ. ಕಾಡಿನ ವೇದಾಂತದ ಜ್ಞಾನವನ್ನು ಮನೆಮನೆಗೂ ತಲುಪಿಸುವಂತಹ ತತ್ತ್ವ ಅದು. ನಾನು ಈ ಅಮೋಘ ಸತ್ಯವನ್ನು ಒಂದು ದಿನ ಇಡೀ ಜಗತ್ತಿನ ಮುಂದೆ ಇಡುತ್ತೇನೆ. ಇದನ್ನು ಬ್ರಾಹ್ಮಣ–ಚಂಡಾಲ, ಶ್ರೀಮಂತ–ಬಡವ, ಬುದ್ಧಿವಂತ–ಮೂರ್ಖ ಎಂಬ ಭೇದಭಾವವಿಲ್ಲದೆ ಎಲ್ಲರಿಗೂ ಬೇಕಾದ ಆದರ್ಶವನ್ನಾಗಿಸುತ್ತೇನೆ."

ಶ್ರೀರಾಮಕೃಷ್ಣರ ಮಹಾಸಮಾಧಿಯ ನಂತರ ಸ್ವಾಮಿ ವಿವೇಕಾನಂದರು ಭಾರತದಾದ್ಯಂತ ಪ್ರವಾಸ ಮಾಡಿ ಪುಣ್ಯಕ್ಷೇತ್ರಗಳನ್ನು, ಇತಿಹಾಸಪ್ರಸಿದ್ಧ ಸ್ಥಳಗಳನ್ನು, ನಗರಗಳನ್ನು, ಹಳ್ಳಿಗಳನ್ನು ನೋಡಿದರು. ಹಳ್ಳಿಯ ಹೊರವಲಯಗಳಲ್ಲಿ, ನಗರದ ಭವ್ಯ ಕಟ್ಟಡಗಳಲ್ಲಿ ಮತ್ತು ಅರಮನೆಗಳಲ್ಲಿಯೂ ಅವರು ತಂಗಿದ್ದರು. ಬಹುವಿಧ ಆಚಾರ, ಸಂಸ್ಕೃತಿಗಳುಳ್ಳ ಬಗೆಬಗೆಯ ಜನರ ನೇರ ಪರಿಚಯ ಅವರಿಗಾಯಿತು.

ಎಲ್ಲೆಲ್ಲೂ ಅವಿದ್ಯೆ, ಕುಸಂಸ್ಕಾರ, ಅನಾಚಾರ, ಬಡತನ, ಅಸೂಯೆ ಮತ್ತು ದಾರುಣ ಸಂಕಷ್ಟಗಳನ್ನು ನೋಡಿ ಸ್ವಾಮಿ ವಿವೇಕಾನಂದರ ಹೃದಯ ಕರುಣೆಯಿಂದ ಮಿಡಿಯಿತು; ಕಣ್ಣಿನಿಂದ ನೀರು ಧಾರಾಕಾರವಾಗಿ ಸುರಿಯಿತು. "ಭಾರತದ ಕೋಟ್ಯಂತರ ಜನರು ತಮ್ಮ ದಾರುಣ ಸ್ಥಿತಿಯಿಂದ ಪಾರಾಗಲು ನಾನು ಏನು ಮಾಡಲಿ?" ಎಂದು ಅವರು ಪರಿತಪಿಸಿದರು. ವಿವಿಧ ಭಾವನೆಗಳು ಅವರ ಚಿತ್ತಾಕಾಶದಲ್ಲಿ ಮೂಡಿಬಂದವು. ಸ್ವಾಮಿ ವಿವೇಕಾನಂದರ ಈ ವೇದನೆಯನ್ನು ಅರ್ಥಮಾಡಿಕೊಂಡು ಅವರು ಬೋಧಿಸಿದ ಸೇವಾಯೋಗವನ್ನು ಮೊಟ್ಟಮೊದಲು ಕಾರ್ಯರೂಪಕ್ಕೆ ತಂದವರೇ ಸ್ವಾಮಿ ಅಖಂಡಾನಂದರು.

## ಸೇವಾಜ್ಯೋತಿಯ ಪ್ರಥಮ ಕಿರಣ

ಸ್ವಾಮಿ ಅಖಂಡಾನಂದರು ಸ್ವಾಮಿ ವಿವೇಕಾನಂದರ ಸೋದರಶಿಷ್ಯರು. 'ಗಂಗಾಧರ' ಎಂಬುದು ಅವರ ಹಿಂದಿನ ಹೆಸರು. ಸ್ವಾಮೀಜಿ ಅವರನ್ನು ಪ್ರೀತಿಯಿಂದ 'ಗ್ಯಾಂಜಸ್' ಎಂದು ಕರೆಯುತ್ತಿದ್ದರು. ತೀರ್ಥಕ್ಷೇತ್ರಗಳು, ಪ್ರಾಚೀನ ಸಾಂಸ್ಕೃತಿಕ ಕೇಂದ್ರಗಳು ಹಾಗೂ ಇತಿಹಾಸಪ್ರಸಿದ್ಧ ಸ್ಥಳಗಳನ್ನು ನೋಡುವುದೆಂದರೆ ಅವರಿಗೆ ಬಹಳ ಇಷ್ಟ. ಅವರ ಈ ಇಚ್ಛೆಯೇ ಟಿಬೆಟ್‌ನಂತಹ ದುರ್ಗಮ ಸ್ಥಾನಗಳಿಗೆ ಅವರನ್ನು ಕೊಂಡೊಯ್ದಿತು. ಅವರು ಪರಿವ್ರಾಜಕರಾಗಿ ಹಿಮಾಲಯ, ಟಿಬೆಟ್ ಮತ್ತು ಭಾರತದ ಇತರ ಸ್ಥಳಗಳಿಗೆ ಏಕಾಂಗಿಯಾಗಿಯೂ ಮತ್ತು ಕೆಲವೆಡೆ ಸ್ವಾಮಿ ವಿವೇಕಾನಂದರೊಂದಿಗೆಯೂ ಪ್ರಯಾಣ ಮಾಡಿದರು. ಯಾವಾಗಲೂ ದಂಡವನ್ನು ಹಿಡಿದು ಪ್ರಯಾಣ ಮಾಡುತ್ತಿದ್ದ ಕಾರಣ ಅವರನ್ನು ಜನರು 'ದಂಡಿ ಬಾಬಾ' ಎಂದು ಕರೆಯುತ್ತಿದ್ದರು. ಮೀರತ್, ರಾಜಾಸ್ಥಾನ್ ಮತ್ತು ಗುಜರಾತುಗಳಲ್ಲಿ ಸ್ವಾಮಿ ವಿವೇಕಾನಂದರ ಜೊತೆ ಅವರು ಸುತ್ತಾಡಿದರು. ನಂತರ ಸ್ವಾಮೀಜಿ ದಕ್ಷಿಣ ದಿಕ್ಕಿಗೆ ಏಕಾಂಗಿಯಾಗಿ ಪ್ರಯಾಣ ಮಾಡಿದಾಗ, ಸ್ವಾಮಿ ಅಖಂಡಾನಂದರು ಜಾಮ್‌ನಗರಕ್ಕೆ ಬಂದರು. ಇಲ್ಲಿ ಅವರ ಜೀವನಕ್ಕೆ ಹೊಸ ತಿರುವು ಸಿಕ್ಕಿತು.

ಸ್ವಾಮಿ ಅಖಂಡಾನಂದರ ಭವಿಷ್ಯದ ಮಹೋನ್ನತ ಸೇವಾಕಾರ್ಯಗಳ ಶುಭೋದಯವಾದದ್ದು ಜಾಮ್‌ನಗರದಲ್ಲಿಯೇ ಎಂದು ಹೇಳಬೇಕು. ಅಲ್ಲಿನ ಝುಂಡೂ ಭಟ್ ಎನ್ನುವ ಒಬ್ಬ ಆಯುರ್ವೇದ ವೈದ್ಯರ ಸೇವಾಕಾರ್ಯ ಅವರಿಗೆ ಆದರ್ಶಪ್ರಾಯವಾಯಿತು. ಝುಂಡೂ ಭಟ್ ಒಂದು ಸಂಸ್ಕೃತ ಶ್ಲೋಕವನ್ನು ಮತ್ತೆ ಮತ್ತೆ ಹೇಳಿಕೊಳ್ಳುತ್ತಿದ್ದರು:

ನ ತ್ವಹಂ ಕಾಮಯೇ ರಾಜ್ಯಂ
ನ ಸ್ವರ್ಗಂ ನಾಪುನರ್ಭವಮ್ ।
ಕಾಮಯೇ ದುಃಖತಪ್ತಾನಾಂ
ಪ್ರಾಣಿನಾಮಾರ್ತಿನಾಶನಮ್ ॥

"ನನಗೆ ರಾಜ್ಯವಾಗಲಿ, ಸ್ವರ್ಗವಾಗಲಿ, ಪುನರ್ಜನ್ಮವಾಗಲಿ ಬೇಕಿಲ್ಲ. ದುಃಖಿಗಳಾದ ಜೀವಿಗಳ ದುಃಖವು ನಿವಾರಣೆಯಾಗುವುದನ್ನು ಮಾತ್ರ ನಾನು ಬಯಸುತ್ತೇನೆ."

ಜಾಮ್‌ನಗರದ ಆ ಆಯುರ್ವೇದ ವೈದ್ಯರ ಮನೆಯೇ ಒಂದು ಆಸ್ಪತ್ರೆಯಾಗಿತ್ತು. ತಮ್ಮಲ್ಲಿಗೆ ಬಂದ ರೋಗಿಗಳನ್ನು ಕುಳ್ಳಿರಿಸಿ ಗಮನವಿಟ್ಟು ಅವರ ಸೇವೆ ಮಾಡುತ್ತಿದ್ದರು. ಪ್ರತಿಯೊಬ್ಬ ರೋಗಿಯ ದುಃಖವನ್ನು ತಾವೂ ಅನುಭವಿಸುತ್ತಿದ್ದರು. ದುಃಖಿಗಳ ಸೇವೆಗಾಗಿ ಏನನ್ನು ಬೇಕಾದರೂ ತ್ಯಾಗಮಾಡಲು ಸಿದ್ಧರಾಗಿದ್ದರು. ಒಮ್ಮೆ ಮೈಯೆಲ್ಲ ಹುಳುಕಡ್ಡಿಯಾಗಿ, ನೋಡಲು ಅಸಹ್ಯವಾಗಿದ್ದ ರೋಗಿಯೊಬ್ಬನು ಅವರೆಡೆಗೆ ಬಂದನು. ಆತನನ್ನು ಮೃದುವಾದ ಹಾಸಿಗೆಯ ಮೇಲೆ ಮಲಗಿಸಿ ಎಣ್ಣೆ ಸವರಬೇಕಾಗಿತ್ತು. ಅಲ್ಲಿ ಹಾಸಿಗೆ ಇಲ್ಲದಿದ್ದರಿಂದ ತಮ್ಮ ಸ್ವಂತ ಹಾಸಿಗೆಯಲ್ಲಿಯೇ ಆತನನ್ನು ಮಲಗಿಸಿದರು. ತಾವು ಬೇರೆಡೆ ಮಲಗಿದರು. ಈ ರೀತಿಯ ಘಟನೆಗಳು ಸ್ವಾಮಿ ಅಖಂಡಾನಂದರ ಹೃದಯವನ್ನು ಕಲಕಿದವು; ಅನುಕಂಪದ ಮಹಾನ್ ತರಂಗಗಳನ್ನು ಎಬ್ಬಿಸಿದವು. ಅಖಂಡಾನಂದರು ಮೇಲ್ನೋಟಕ್ಕೆ ಕಠಿಣ ಹೃದಯದ ವೇದಾಂತಿಗಳಂತೆ ಕಂಡುಬಂದರೂ, ಅದರ ಹಿಂದೆ ಸುಕೋಮಲ ಹೃದಯಸ್ಪರ್ಶಿ ಭಾವನೆಗಳು ಸುಪ್ತವಾಗಿ ಅಡಗಿದ್ದವು. ಪರಾನುಕಂಪ, ಪರದುಃಖಾನುಭವ-- ಇವು ಅವರ ವ್ಯಕ್ತಿತ್ವದ ಅಂತರಾಳದಿಂದ ಹೊರಹೊಮ್ಮಲು ಕಾತರಗೊಂಡಿದ್ದವು.

## ಪ್ರವಾಸದಿಂದ ಜೀವಸೇವೆಗೆ

"ಮನುಷ್ಯನ ಸೇವೆ ಮಾಡುವುದು ಮತ್ತು ಮನುಷ್ಯನನ್ನು ಪ್ರೀತಿಸುವುದೇ ವ್ಯಕ್ತಿಯೊಬ್ಬನ ಜೀವನದಲ್ಲಿ ಅತ್ಯುತ್ತಮವಾದದ್ದು" –ಸ್ವಾಮಿ ವಿವೇಕಾನಂದರ ಈ ಮಾತುಗಳಲ್ಲಿನ ಸತ್ಯವು ಸ್ವಾಮಿ ಅಖಂಡಾನಂದರಲ್ಲಿ ಈಗ ಸಂಪೂರ್ಣವಾಗಿ ಜಾಗೃತವಾಯಿತು. ಸ್ವಂತ ಆತ್ಮೋದ್ಧಾರಕ್ಕಾಗಿ ತೀರ್ಥಯಾತ್ರೆ ಮತ್ತು ಪ್ರವಾಸಗಳಲ್ಲಿ ಅವರು ಇಷ್ಟು ದಿನ ಕಾಲ ಕಳೆದಿದ್ದರು. 'ಜೀವರಲ್ಲಿ ಶಿವನನ್ನು ಕಂಡು ಆತನ ಸೇವೆಯನ್ನು ಮಾಡಬೇಕು' ಎನ್ನುವ ತವಕ ಈಗ ಅವರಿಗುಂಟಾಯಿತು.

ಇತ್ತೀಚೆಗಷ್ಟೇ ಸ್ವಾಮಿ ವಿವೇಕಾನಂದರ ವಿಶಾಲ ಹೃದಯದ ಸಂಸ್ಪರ್ಶ ಅವರಿಗಾಗಿತ್ತು. ಭಾರತೀಯ ಜನರ ಶೋಚನೀಯ ಅವಸ್ಥೆ ಅವರ ಮನವನ್ನು ಕಲಕಿತ್ತು. ಮುಂದೆ ಅವರು ಬರೆದ ಒಂದು ಪ್ರಬಂಧದಿಂದ ಅವರಲ್ಲಿ ಮೂಡಿದ ಭಾವನೆಗಳ ಪರಿಚಯ ದೊರೆಯುತ್ತದೆ. ಅವರು ಅದರಲ್ಲಿ ಹೀಗೆ ಬರೆಯುತ್ತಾರೆ:

"ಭಾರತವಾಸಿಗಳು ಈಗ ಜೀವನದ ಕಠಿಣ ಸಮಸ್ಯೆಗಳಲ್ಲಿ ನರಳುತ್ತಿದ್ದಾರೆ. ಅವುಗಳನ್ನು ಒಂದು ಸಾರಿ ನಾವು ಪರಿಭಾವಿಸಿ ನೋಡುವುದು ಉಚಿತವಲ್ಲವೇ? ಕೋಟಿ ಕೋಟಿ ಭಾರತವಾಸಿಗಳು ಇರುವ ನೈಜ ಅವಸ್ಥೆಯನ್ನು ನಾವು ಪರ್ಯಾಲೋಚಿಸಿ ನೋಡಿದರೆ ಅವರು ಪ್ರಾಣಹೀನರಾಗಿ, ಶಕ್ತಿಹೀನರಾಗಿ ಕೇವಲ ಎಲುಬಿನ ಗೊಂಬೆಗಳಾಗಿದ್ದಾರೆ ಎನ್ನುವುದು ಕಂಡುಬರುತ್ತದೆ. ಎಂದರೆ ಅವರು ಯಾವುದೋ ಒಂದು ದೈಹಿಕ ಕ್ರಿಯೆಯಲ್ಲಿ ಮಾತ್ರ ತೊಡಗಿದ್ದಾರೆ; ಅವರಿಗೆ ಮನುಷ್ಯನ ಆಕಾರ ಮಾತ್ರವಿದೆ; ಆದರೆ ಮಾನವನಿಗೆ ಉಚಿತವಾದ ಬೇರಾವುದೂ ಅವರಲ್ಲಿಲ್ಲ."

"ಯಾರ ಹೊಟ್ಟೆಗೆ ಅನ್ನ ಇಲ್ಲವೋ, ಮೈಗೆ ಬಟ್ಟೆ ಇಲ್ಲವೋ, ವಾಸಿಸಲು ಸ್ಥಳ ಇಲ್ಲವೋ, ಯಾರು ತಮ್ಮ ಕುಟುಂಬದ ಊಟ ವಸತಿಗಳ ಚಿಂತನೆಯಲ್ಲೇ ಸದಾ ಮಗ್ನರೋ, ಅವರ ಮನಸ್ಸಿನಲ್ಲಿ ಧರ್ಮ ಹೇಗೆ ತಾನೆ ಸ್ಥಾನ ಪಡೆಯುತ್ತದೆ? ಅವರಿಗೆ ತಮ್ಮ ಚಿಂತೆಯನ್ನು ಬಿಟ್ಟು ಬೇರೆ ಚಿಂತನೆಯನ್ನು ಮಾಡುವುದಕ್ಕೆ ಸಮಯವಾದರೂ ಎಲ್ಲಿ? ಆದುದರಿಂದ ಬನ್ನಿ, ನಾವೆಲ್ಲ ಸೇರಿ ಅಂತಹ ಬಡಜನರ ಉದ್ಧಾರದ ಮಾರ್ಗವನ್ನು ಹುಡುಕೋಣ."

ಸ್ವಾಮಿ ಅಖಂಡಾನಂದರು, ಜಾಮ್‌ನಗರವನ್ನು ಬಿಟ್ಟು ಖೇತ್ರಿಯ ಹತ್ತಿರ ಇದ್ದ ಮಲ್ಸಿಸಾರ್ ಎಂಬ ಜಾಗಕ್ಕೆ ಬಂದರು. ರಾಜಸ್ಥಾನದ ಈ ಭಾಗದಲ್ಲಿ ಸುಮಾರು ಎಂಟು ತಿಂಗಳಿದ್ದರು. ಈ ಅವಧಿಯಲ್ಲಿ ಅಲ್ಲಿದ್ದ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಸಂಚರಿಸಿದರು. ಅಲ್ಲಿನ ಜಮೀನ್ದಾರರು ಮತ್ತು ಅವರಿಂದ ಜಮೀನನ್ನು ಪಡೆದಂತಹ ಗೇಣಿದಾರರ ನೇರ ಪರಿಚಯ ಅವರಿಗಾಯಿತು. ಗೇಣಿದಾರರು ಗಾಳಿ, ಬೆಳಕು ಇಲ್ಲದ ಮಬ್ಬಾದ ಗುಡಿಸಲುಗಳಲ್ಲಿ ವಾಸಿಸುತ್ತಿದ್ದರು; ಸರಿಯಾದ ಆಹಾರ ಮತ್ತು ಬಟ್ಟೆಯಿಲ್ಲದೆ ಕಂಗೆಟ್ಟಿದ್ದರು. ಜಮೀನುದಾರರು ಜಿಗಣೆಯಂತೆ ಅವರಲ್ಲಿ ಇದ್ದುದನ್ನೆಲ್ಲಾ ತಮ್ಮ ಸ್ವಂತ ಭೋಗಕ್ಕಾಗಿ ಹೀರುತ್ತಿದ್ದರು. ಅವರ ನಿರ್ಗತಿಕ ಅವಸ್ಥೆಯನ್ನು ನೋಡಿ ಸ್ವಾಮಿ ಅಖಂಡಾನಂದರ ಹೃದಯ ಕರಗಿತು. ಅವರಿಗಾಗಿ ಏನಾದರೂ ಮಾಡಬೇಕೆಂದು ಖೇತ್ರಿ ಮಹಾರಾಜರಿಗೆ ಪತ್ರ ಬರೆದರು.

ಮಹಾರಾಜರು ಈ ವಿಷಯದಲ್ಲಿ ಏನೂ ಪರಿಹಾರ ಸೂಚಿಸಲಿಲ್ಲ. ಅದಕ್ಕೆ ಬದಲಾಗಿ ಸ್ವಾಮಿ ಅಖಂಡಾನಂದರನ್ನು ಖೇತ್ರಿಗೆ ಕರೆಸಿಕೊಂಡರು. ಅಖಂಡಾನಂದರು ಗೇಣಿದಾರರ ದೈನ್ಯಸ್ಥಿತಿಯ ಬಗ್ಗೆ ಸ್ವಾಮಿ ವಿವೇಕಾನಂದರಿಗೆ ಒಂದು ವಿಸ್ತೃತವಾದ ಪತ್ರವನ್ನು ಬರೆದರು. ಗೇಣಿದಾರರ ಸುಧಾರಣೆಗಾಗಿ ಏನನ್ನಾದರೂ ಮಾಡಲೇಬೇಕೆಂಬ ತಮ್ಮ ಸಂಕಲ್ಪ ಸರಿಯೇ ಎಂಬ ತಮ್ಮ ಸಂದೇಹಕ್ಕೆ ಉತ್ತರವನ್ನು ಕೋರಿ ಅವರು ಈ ಪತ್ರ ಬರೆದಿದ್ದರು.

ಅದಕ್ಕೆ ಸ್ವಾಮಿ ವಿವೇಕಾನಂದರ ಉತ್ತರ ಹೀಗಿತ್ತು: "ಖೇತ್ರಿಯಲ್ಲಿರುವ ಬಡವರ, ದೀನದಲಿತರ ಮನೆಗಳಿಗೆ ಹೋಗಿ ಅವರಿಗೆ ಧರ್ಮವನ್ನು ಬೋಧಿಸು. ಭೂಗೋಳದಂತಹ ವಿಷಯಗಳಲ್ಲಿ ಪಾಠಗಳನ್ನೂ ನಡೆಸು. ಸೋಮಾರಿಯಾಗಿ ಕುಳಿತು ರಾಜಯೋಗ್ಯ ಭಕ್ಷ್ಯಗಳನ್ನು ತಿನ್ನುತ್ತಾ 'ಹೇ ದೇವ ರಾಮಕೃಷ್ಣ!' ಎನ್ನುತ್ತಿದ್ದರೆ ಏನೂ ಆಗಲಾರದು. ಪ್ರತ್ಯಕ್ಷವಾಗಿ ನೀನು ಬಡವರಿಗೆ ಏನಾದರೂ ಮಾಡುವವರೆಗೆ, ಇತರರಿಗೆ ನೆರವಾಗುವುದಕ್ಕಾಗಿ ಹುಲ್ಲುಹಾಸಿನ ಮೇಲೆ ಮಲಗುವುದು ಮೇಲು. ಕಾವಿವಸ್ತ್ರ ಸುಖಪಡುವುದಕ್ಕಾಗಿ ಅಲ್ಲ. ಅದು ವೀರ್ಯವತ್ತಾದ ಕಾಯಕದ ದ್ಯೋತಕ. ದರಿದ್ರರು, ಅನಕ್ಷರಸ್ಥರು, ಅಜ್ಞಾನಿಗಳು, ಯಾತನೆಗೆ ಒಳಗಾದವರು–ಇವರೇ ನಿನ್ನ ದೇವರಾಗಲಿ. ಇವರಿಗೆ ಸೇವೆ ಮಾಡುವುದು ಮಾತ್ರವೇ ಅತ್ಯುನ್ನತ ಧರ್ಮ ಎಂದು ತಿಳಿ."

ಹೀಗೆ ಉತ್ತರ ಪಡೆದನಂತರ, ಸ್ವಾಮಿ ಅಖಂಡಾನಂದರು ಮೊದಲಿಗೆ ಬಡ ಜನರಲ್ಲಿ ಶೈಕ್ಷಣಿಕ ಕಾರ್ಯವನ್ನು ಕೈಗೊಂಡರು. ಮಹಾರಾಜರ ವತಿಯಿಂದ ನಡೆಸಲ್ಪಡುತ್ತಿದ್ದ ಒಂದು ಶಾಲೆಯಲ್ಲಿ ಕೇವಲ ಎಂಬತ್ತು ಹುಡುಗರು ಮಾತ್ರ ಇದ್ದರು. ಪ್ರತಿಯೊಂದು ಮನೆಯ ಹುಡುಗನಿಗೂ ಶಿಕ್ಷಣ ಸಿಗಬೇಕೆಂದು ಸ್ವಾಮಿ ಅಖಂಡಾನಂದರು ಮನೆಮನೆಗೆ ಹೋಗಿ ಪೋಷಕರನ್ನು ಪ್ರೇರೇಪಿಸಿದರು. ಶಿಕ್ಷಣದ ಬಗ್ಗೆ ಏನೂ ಗೊತ್ತಿಲ್ಲದ ಬಡಜನರು ಕೂಡ ಇದರಿಂದಾಗಿ, ತಮ್ಮ ಮಕ್ಕಳನ್ನು ಶಾಲೆಗೆ ಕಳಿಸಲು ಆರಂಭಿಸಿದರು. ಮನೆಯಲ್ಲಿ ನಾಲ್ಕು ಮಕ್ಕಳಿದ್ದರೆ, ಮೂರು ಜನರನ್ನು ಕಳುಹಿಸಿಕೊಟ್ಟರು. ಒಬ್ಬ ಮಾತ್ರ ಮನೆಕೆಲಸಕ್ಕಾಗಿ ಮನೆಯಲ್ಲೇ ಉಳಿದುಕೊಳ್ಳುತ್ತಿದ್ದ. ಖೇತ್ರಿ ಮಹಾರಾಜರ ಅರಮನೆಯಲ್ಲಿ ವಂಶಪಾರಂಪರ್ಯವಾಗಿ ಸೇವೆ ಮಾಡುತ್ತಿದ್ದ ಸೇವಕರು ಕೂಡ ತಮ್ಮ ಮಕ್ಕಳನ್ನು ಅಖಂಡಾನಂದರ ಪ್ರೇರಣೆಯಿಂದ ಶಾಲೆಗೆ ಸೇರಿಸಿದರು. ಇದರಿಂದ ಶಾಲಾ ಮಕ್ಕಳ ಸಂಖ್ಯೆ ಶೀಘ್ರದಲ್ಲಿಯೇ ೨೫೦ ಕ್ಕೆ ಏರಿತು.

ಮುಂದಿನ ಚಾತುರ್ಮಾಸಕ್ಕಾಗಿ ಅವರು ಉದಯಪುರಕ್ಕೆ ಬಂದರು. ಉದಯಪುರದ ರಾಜ ಮಹಾರಾಣಾ ಸನ್ಯಾಸಿಗಳ ಸತ್ಕಾರಕ್ಕಾಗಿ ಎಲ್ಲ ವ್ಯವಸ್ಥೆಗಳನ್ನು ಮಾಡುತ್ತಿದ್ದನು. ಒಬ್ಬ ಪರಮಹಂಸ ಸಂನ್ಯಾಸಿ ಬಂದಿದ್ದಾನೆ ಎಂದು ತಿಳಿದ ರಾಜನ ಮುಖ್ಯ ಪೂಜಾರಿ ಅವರ ಬಳಿ ಬಂದು, "ನಾವು ನಿಮಗಾಗಿ ಏನು ಮಾಡಬೇಕು?" ಕೇಳಿದ. ಅದಕ್ಕೆ ಸ್ವಾಮಿ ಅಖಂಡಾನಂದರು ಕೊಟ್ಟ ಉತ್ತರ ಮಾರ್ಮಿಕವಾಗಿತ್ತು: "ಹೊಟ್ಟೆಗಿಲ್ಲದ ಯಾವ ಮಗನೂ ಮಹಾರಾಣಾನಿಗೆ ಇಲ್ಲದೇ ಹೋದಲ್ಲಿ ಮತ್ತು ಅವನೇ ಬಂದು ನನಗೆ ಭಿಕ್ಷೆ ಕೊಟ್ಟರೆ ಮಾತ್ರ ನಾನದನ್ನು ಸ್ವೀಕರಿಸುತ್ತೇನೆ." ಇದರ ಅರ್ಥವೇನೆಂದು ಪ್ರಶ್ನಿಸಿದಾಗ ಅವರು ಹೀಗೆ ಹೇಳಿದರು: "ಮಹಾರಾಣಾನ ರಾಜ್ಯದಲ್ಲಿ ೧೮ ಲಕ್ಷ ಜನರಿದ್ದಾರೆಂದು ಕೇಳಿದ್ದೇನೆ. ಅವರೆಲ್ಲರಿಗೂ ಹಸಿವಿಲ್ಲದಂತಾದರೆ ಮಹಾರಾಣಾನ ಮಕ್ಕಳೆಲ್ಲರಿಗೂ ಹೊಟ್ಟೆ ತುಂಬಿದೆ ಎಂದರ್ಥ. ಅವರಲ್ಲಿ ಯಾರೂ ಹಸಿವಿಲ್ಲದೆ ಇದ್ದಾರೆ ಎನ್ನುವುದನ್ನು ನೀವು ಖಚಿತಪಡಿಸಬಲ್ಲಿರಾ?" ಹೀಗೆ ಅವರು ರಾಜನ ಭಿಕ್ಷೆಯನ್ನು ನಿರಾಕರಿಸಿದರು. ಈ ಸುದ್ದಿ ಮಹಾರಾಣಾನಿಗೆ ಮುಟ್ಟಿದಾಗ ಆತ ಕೋಪಗೊಂಡನು. ಸ್ವಾಮಿ ಅಖಂಡಾನಂದರಿಗೆ ಅವನಿಂದ ಯಾವ ಸಹಾಯವೂ ಸಿಕ್ಕಲಿಲ್ಲ.

ಅನಂತರ ಸ್ವಾಮಿ ಅಖಂಡಾನಂದರು ಉದಯಪುರವನ್ನು ಬಿಟ್ಟು ನಾಥದ್ವಾರಕ್ಕೆ ಬಂದರು. ಅಲ್ಲಿ ಶ್ರೀ ರಘುನಾಥ್ ಜಿ. ಭಂಡಾರಿ ಎನ್ನುವವರ ಮನೆಯಲ್ಲಿ ಉಳಿದುಕೊಂಡರು. ಅವರ ಕಿರಿಯ ಮಗ ಶಾಲೆಗೆ ಹೋಗುವುದಕ್ಕೆ ಹಿಂಜರಿಯುತ್ತಿದುದನ್ನು ಕಂಡು ತಾವೇ ಆತನಿಗೆ ವಿದ್ಯಾಭ್ಯಾಸ ನೀಡಲು ಆರಂಭಿಸಿದರು. ಮತ್ತೆ ಕೆಲವು ವಿದ್ಯಾರ್ಥಿಗಳು ಸೇರಿ ಅಲ್ಲಿ ಒಂದು ಶಾಲೆಯೇ ಪ್ರಾರಂಭವಾಯಿತು. ಅಲ್ಲಿಂದ ಓಂಕಾರನಾಥ ಮುಂತಾದ ಸ್ಥಳಗಳನ್ನು ನೋಡಿಕೊಂಡು ಖೇತ್ರಿಗೆ ವಾಪಸ್ಸಾದರು. ವೇದಾಧ್ಯಯನವನ್ನು ಪುನರುಜ್ಜೀವನಗೊಳಿಸಲು 'ಖೇತ್ರಿ ಆದರ್ಶ ವೈದಿಕ ವಿದ್ಯಾಲಯ'ವನ್ನು ಖೇತ್ರಿಯಲ್ಲಿ ಸ್ಥಾಪಿಸಿದರು. ಇಲ್ಲಿ ವೇದ, ವೇದಾಂಗಗಳನ್ನು ಅರ್ಥಸಹಿತವಾಗಿ ಕಲಿಸಲಾಗುತ್ತಿತ್ತು.

### ಸಹೋದರರೊಂದಿಗೆ

ಐದಾರು ತಿಂಗಳುಗಳ ನಂತರ ೧೮೯೫ ರಲ್ಲಿ ಅಖಂಡಾನಂದರು ಕೊಲ್ಕತಾದ ಆಲಂಬಜಾರ್ ಮಠಕ್ಕೆ ತಿರುಗಿ ಬಂದರು. ತಮ್ಮ ಸಹೋದರಸನ್ಯಾಸಿಗಳ ಜೊತೆ ಮತ್ತೆ ಕೂಡಿಕೊಂಡು ಸಂತೋಷಪಟ್ಟರು. ಆಗ ಕಾಲರಾ ಸಾಂಕ್ರಾಮಿಕ ರೋಗ ಎಲ್ಲೆಡೆ ಹರಡಿತ್ತು. ಅಖಂಡಾನಂದರು ತಮ್ಮ ಕ್ಷೇಮವನ್ನೂ ಲೆಕ್ಕಿಸದೆ ರೋಗಿಗಳ ಬಳಿ ಹೋಗಿ ಸೇವೆ ಮಾಡುತ್ತಿದ್ದರು.

ಒಂದು ದಿನ ಮಠದಲ್ಲಿ ಸಹೋದರಸನ್ಯಾಸಿಗಳು ನಿದ್ರಿಸುತ್ತಿದ್ದರು. ಸ್ವಾಮಿ ಅಖಂಡಾನಂದರೂ ಮಲಗಿದ್ದರು. ಸಹೋದರರೆಲ್ಲ ಸೆಖೆಯಿಂದ ಬೆವರುತ್ತಿದುದನ್ನು ಅವರು ಕಂಡರು. ಹಾಸಿಗೆಯನ್ನು ಬಿಟ್ಟೆದ್ದು, ಒಂದು ದೊಡ್ಡ ಬೀಸಣಿಗೆಯನ್ನು ತೆಗೆದುಕೊಂಡು ಅವರಿಗೆಲ್ಲ ಗಾಳಿ ಬೀಸತೊಡಗಿದರು. ನಿದ್ರಿಸುತ್ತಿದ್ದವರೆಲ್ಲ ಆರಾಮದ ಭಂಗಿಗೆ ತಿರುಗಿ ಹಾಯಾಗಿ ನಿದ್ರಿಸಿದರು. ಏನು ಆಶ್ಚರ್ಯ! ಅರ್ಧಗಂಟೆಯ ಬೀಸುವಿಕೆಯಿಂದ ಅವರ ಶರೀರವೂ ತಣ್ಣಗಾಗಿ ಹೋಗಿತ್ತು. ಇತರರ ದುಃಖವನ್ನು ಕಂಡು ಸೇವೆ ಮಾಡುವುದರಿಂದ, ತಮ್ಮ ಸಹನಶಕ್ತಿಯೂ ಹೆಚ್ಚಾಗುವುದನ್ನು ಕಂಡು ಅವರು ಸಂತೋಷಪಟ್ಟರು.

೧೮೯೭ ರಲ್ಲಿ ಸ್ವಾಮಿ ವಿವೇಕಾನಂದರು ಭಾರತಕ್ಕೆ ಮರಳಿ ಬಂದರು. ಈ ಸಮಯದಲ್ಲಿ ಸ್ವಾಮಿ ಅಖಂಡಾನಂದರು ವೇದ ವಿದ್ಯಾಲಯವೊಂದನ್ನು ಸ್ಥಾಪಿಸಲು ಬಹಳ ಪ್ರಯತ್ನಿಸಿದರು. ಆದರೆ ಅದು ಸಫಲವಾಗಲಿಲ್ಲ. ಇತಿಹಾಸ ಪ್ರಸಿದ್ಧ ಸಾಂಸ್ಕೃತಿಕ ಕೇಂದ್ರಗಳನ್ನು ಸಂದರ್ಶಿಸಲು ಅವರ ಮನಸ್ಸು ಸದಾ ತವಕಿಸುತ್ತಿತ್ತು. ಅದರಿಂದಲೇ ನವದ್ವೀಪ ದರ್ಶನಕ್ಕೆಂದು ಹೊರಟರು. ನವದ್ವೀಪದ ದರ್ಶನದ ನಂತರ ಮುರ್ಷಿದಾಬಾದ್ ಕಡೆ ಹೊರಟರು.

### ಜೀವನಲ್ಲಿ ಶಿವನ ಪೂಜೆ

ಸ್ವಾಮಿ ಅಖಂಡಾನಂದರು ಮುರ್ಷಿದಾಬಾದ್ ಕಡೆ ನಡೆಯುತ್ತಾ ದಾದ್‌ಪುರ ಎನ್ನುವ ಸ್ಥಳಕ್ಕೆ ಬಂದರು. ಒಂದು ವರಾಂಡದಲ್ಲಿ ರಾತ್ರಿ ಮಲಗಿ ಬೆಳಗ್ಗೆ ಬಜಾರಿನ ಕಡೆ ನಡೆದು ಬರುತ್ತಿರುವಾಗ ಸುಮಾರು ೧೪ ವರ್ಷದ ಮುಸಲ್ಮಾನ ಹುಡುಗಿ ಅಳುತ್ತಿದ್ದುದನ್ನು ನೋಡಿದರು. ಚಿಂದಿಬಟ್ಟೆಗಳನ್ನು ಉಟ್ಟಿದ್ದ ಆಕೆಯ ಕಂಕುಳಲ್ಲಿ ತಳ ಒಡೆದಿದ್ದ ಮಣ್ಣಿನ ಪಾತ್ರೆಯಿತ್ತು. ಇವರನ್ನು ಕಂಡ ಕೂಡಲೇ ಆ ಹುಡುಗಿ ಹೇಳಿದಳು, "ಬಾಬಾ, ಇಲ್ಲಿ ಕ್ಷಾಮವಿದೆ. ನಮ್ಮ ಮನೆಯಲ್ಲಿ ತಿನ್ನುವುದಕ್ಕೆ ಏನೂ ಇಲ್ಲ. ನಮ್ಮಲ್ಲಿ ಒಂದೇ ಒಂದು ಮಡಕೆ ಮತ್ತು ಎರಡು ತಟ್ಟೆಗಳಿದ್ದವು. ಈಗ ಅವೂ ಮುರಿದುಹೋದವು. ನೀರಿಗಾಗಿ ಬೇರೆ ಮಡಕೆ ಇಲ್ಲ. ಮನೆಗೆ ಹೋದರೆ ಅಮ್ಮ ಹೊಡೆಯುತ್ತಾಳೆ. ಅದಕ್ಕೇ ನಾನು ಅಳುತ್ತಾ ಇದ್ದೇನೆ." ಈ ಮಾತನ್ನು ಕೇಳಿ ಸ್ವಾಮಿ ಅಖಂಡಾನಂದರ ಮನ ಕರಗಿತು. ತಮ್ಮಲ್ಲಿದ್ದ ಸ್ವಲ್ಪ ಹಣದಿಂದ ಅವಳಿಗೆ ಒಂದು ಮಡಕೆ ಮತ್ತು ಸ್ವಲ್ಪ ಅವಲಕ್ಕಿಯನ್ನು ಹತ್ತಿರದ ಅಂಗಡಿಯಿಂದ ಕೊಡಿಸಿದರು. ಅಷ್ಟರಲ್ಲಿ ಪಕ್ಕದ ಊರಿನ ಹನ್ನೆರಡು ಮಕ್ಕಳು ಬಂದು ಅವರನ್ನು ಮುತ್ತಿದರು. ಅವರೆಲ್ಲ ಹಸಿವಿನಿಂದ ಕಂಗೆಟ್ಟಿದ್ದರು. ಉಳಿದಿದ್ದ ಮೂರು ಆಣೆಯಷ್ಟು ಹಣದಿಂದ ಅವರಿಗೂ ಅವಲಕ್ಕಿಯನ್ನು ಕೊಟ್ಟರು. ಈಗ ಅಖಂಡಾನಂದರ ಹತ್ತಿರ ಒಂದು ಕಾಸೂ ಇರಲಿಲ್ಲ. ಆದರೂ ಒಬ್ಬ ವಯಸ್ಸಾದ ಮುದುಕಿ ನರಳುತ್ತಿದ್ದಾಳೆಂದು ತಿಳಿದು ಆಕೆಯ ಶುಶ್ರೂಷೆ ಮಾಡಿದರು. ಆ ಬರಗಾಲದ ಪ್ರದೇಶದಿಂದ ಬೇಗ ಹೊರಟು ಹೋಗಲು ಪ್ರಯತ್ನಿಸಿದರು. ಮೂರು ಬಾರಿ ಪ್ರಯತ್ನಪಟ್ಟರೂ ಅವರ ಅಂತರ್ಯದಿಂದ ಹೊರಹೊಮ್ಮಿದ ದನಿಯೊಂದು, "ಎಲ್ಲಿಗೆ ಹೋಗುವೆ? ನೀನು ಇಲ್ಲಿ ಮಾಡಬೇಕಾದುದು ಬಹಳ ಇದೆ" ಎಂದು ಅವರನ್ನು ಅಲ್ಲೇ ತಡೆಯುತ್ತಿತ್ತು.

ಅನಂತರ ಸ್ವಾಮಿ ಅಖಂಡಾನಂದರು ಮಹುಲ ಎಂಬ ಸ್ಥಳಕ್ಕೆ ಬಂದರು. ಒಬ್ಬ ಬ್ರಾಹ್ಮಣರ ಮನೆಯಲ್ಲಿ ಆತಿಥ್ಯವನ್ನು ಪಡೆದರು. ಅಂದು ಅವರ ಮನೆಯಲ್ಲಿ ಅನ್ನಪೂರ್ಣೆಯ ಪೂಜೆ ನಡೆಯುತ್ತಿತ್ತು. ಸ್ವಾಮಿ ಅಖಂಡಾನಂದರು ಜಗನ್ಮಾತೆ ಅನ್ನಪೂರ್ಣೆಯಲ್ಲಿ ಅಲ್ಲಿನ ದುಃಖಿತ ಜನರಿಗಾಗಿ ಕಾತರತೆಯಿಂದ ಬೇಡಿಕೊಂಡರು. ಶ್ರೀರಾಮಕೃಷ್ಣರಲ್ಲಿಯೂ ಕಣ್ಣೀರು ಸುರಿಸಿ ಬೇಡಿಕೊಂಡರು. ಶ್ರೀರಾಮಕೃಷ್ಣರು ದರ್ಶನಕೊಟ್ಟು "ಕಾದು ನೋಡು" ಎಂದರು.

ಸ್ವಾಮಿ ಅಖಂಡಾನಂದರು ಬೇಲೂರು ಮಠಕ್ಕೆ ತಮ್ಮ ಕಾರ್ಯದ ಕುರಿತು ಮತ್ತೆ ಮತ್ತೆ ಪತ್ರಗಳನ್ನು ಬರೆದರು. ಬರಗಾಲದ ಸ್ಥಳದಲ್ಲಿ ಇವರು ಇದ್ದರೆ ಅಲ್ಲಿನ ಜನಗಳ ಮೇಲೆ ಇವರ ನಿರ್ವಹಣೆಯೇ ಭಾರವಾಗುವುದೆಂದು ಕೆಲವರು, ಅವರನ್ನು ತಿರುಗಿ ಹೋಗಿ ಎಂದು ಹೇಳಿದರು. ಅಲ್ಲಿಂದ ಓಡಿಹೋಗುವುದು ಹೇಡಿತನವೆಂದು ನಿರ್ಧರಿಸಿದ ಅಖಂಡಾನಂದರು, ಒಬ್ಬರಿಗಾದರೂ ತನ್ನಿಂದ ಸಹಾಯವಾದರೆ ಅದೇ ಸಾರ್ಥಕವೆಂದು ಅಲ್ಲಿಯೇ ಉಳಿಯಲು ತೀರ್ಮಾನಿಸಿದರು. ಕಡೆಗೂ ಸ್ವಾಮಿ ವಿವೇಕಾನಂದರ ಪತ್ರ ಅವರಿಗೆ ತಲುಪಿತು:

"ನಿನ್ನಿಂದ ವಿವರವಾದ ವರದಿಗಳು ತಲುಪಿದಂತೆಲ್ಲ ನನಗೆ ಹೆಚ್ಚು ಹೆಚ್ಚು ಸಂತೋಷವಾಗುತ್ತಿದೆ. ಅಂತಹ ಕೆಲಸವೇ ಲೋಕವನ್ನು ಜಯಿಸುವುದು... ದುಡಿ, ದುಡಿ, ಸಾಯುವವರೆಗೂ ದುಡಿ! ಯಾರು ದುರ್ಬಲರೋ ಅವರು ಕೆಲಸಗಾರರಾಗಬೇಕು, ಮಹಾವೀರರಾಗಬೇಕು – ಹಣದ ಬಗ್ಗೆ ಚಿಂತಿಸಬೇಡ, ಅದು ಆಕಾಶದಿಂದಲೇ ಉದುರುವುದು..... ಹೃದಯ, ಹೃದಯವೇ ಗೆಲ್ಲುವುದು, ಮಿದುಳಲ್ಲ. ಪುಸ್ತಕ ಕಲಿಕೆ, ಯೋಗ, ಧ್ಯಾನ, ಜ್ಞಾನದ ಬೆಳಕು– ಇವೆಲ್ಲವೂ ಪ್ರೀತಿಯ ಎದುರು ಧೂಳಿನ ಕಣಗಳಂತೆ. ಪ್ರೇಮವೇ ನಿನಗೆ ಪವಾಡದಂತಹ ಶಕ್ತಿಯನ್ನು ಕೊಡುವುದು, ಪ್ರೇಮವೇ ಭಕ್ತಿಯನ್ನುಂಟುಮಾಡುವುದು, ಪ್ರೇಮವೇ ಜ್ಞಾನವನ್ನೀಯುವುದು; ಅಲ್ಲದೆ ಮುಕ್ತಿಯೆಡೆಗೆ ನಿನ್ನನ್ನು ಕರೆದೊಯ್ಯುವುದೂ ಪ್ರೇಮವೇ. ಮಾನವನ ಹೃದಯಗಹ್ವರದಲ್ಲಿರುವ ದೇವನ ಪೂಜೆಯೇ ಭಗವಂತನ ಉಪಾಸನೆ."

ಸ್ವಾಮಿ ವಿವೇಕಾನಂದರಿಂದ ಮತ್ತು ಇತರ ಕಡೆಗಳಿಂದ ಹಣ ಬಂದಿತು. ಬೇಲೂರು ಮಠದಿಂದ ಇಬ್ಬರು ಸನ್ಯಾಸಿಗಳೂ ನೆರವಿಗೆ ಬಂದರು. ಮಹುಲದಲ್ಲಿ ರಾಮಕೃಷ್ಣ ಮಹಾಸಂಘದ ಮೊದಲ ಬರಪರಿಹಾರ ಕಾರ್ಯ ಸ್ವಾಮಿ ಅಖಂಡಾನಂದರಿಂದ ಆರಂಭವಾಯಿತು. ಅವರು ಸುತ್ತಮುತ್ತಲಿನ ಹಳ್ಳಿಗಳನ್ನೆಲ್ಲಾ ಸುತ್ತಿ ಸೌಲಭ್ಯಕ್ಕೆ ಅರ್ಹರಾದವರ ಪಟ್ಟಿಗಳನ್ನು ತಯಾರು ಮಾಡಿ, ಅವರೆಲ್ಲರೂ ಮಹುಲಕ್ಕೆ ಬಂದು ಅಕ್ಕಿಯನ್ನು ಪಡೆಯುವಂತೆ ವ್ಯವಸ್ಥೆ ಮಾಡಿದರು. ಸುಮಾರು ಐವತ್ತು ಹಳ್ಳಿಗಳ ಬಡಜನಗಳಿಗೆ ಇದರಿಂದ ಅನುಕೂಲವಾಯಿತು.

ಅಷ್ಟರಲ್ಲಿ ಸ್ವಾಮಿ ಅಖಂಡಾನಂದರು ಕೆಲವು ಅನಾಥ ಬಾಲಕರನ್ನು ಕಂಡು, ಅವರಿಗೆ ನೆರವು ನೀಡಲು ಶಿವನಗರ ಎಂಬಲ್ಲಿ ಒಂದು ಅನಾಥಾಲಯವನ್ನು ಸ್ಥಾಪಿಸಿದರು. ಆ ಮಕ್ಕಳ ವ್ಯಕ್ತಿತ್ವ ವಿಕಸನಕ್ಕಾಗಿ ಆಟ, ಪಾಠ, ಪ್ರಾರ್ಥನೆ ಮುಂತಾದ ಎಲ್ಲ ರೀತಿಯ ತರಬೇತಿಯೂ ಅಲ್ಲಿ ದೊರೆಯುತ್ತಿತ್ತು. ಸ್ವಾಮಿ ಅಖಂಡಾನಂದರು ಮಕ್ಕಳನ್ನು ಸಾಕ್ಷಾತ್ ಶಿವಸ್ವರೂಪರೆಂದೇ ತಿಳಿದು ಅವರಿಗೆ ಸೇವೆ ಸಲ್ಲಿಸುತ್ತಿದ್ದರು. ಈ ಸೇವೆಯಲ್ಲಿ ಆ ಮಕ್ಕಳ ಮೈತಿಕ್ಕುವುದು, ಸ್ನಾನ ಮಾಡಿಸುವುದು ಮುಂತಾದುವು ಸೇರಿರುತ್ತಿದ್ದವು. ಅನಾಥ ಮಕ್ಕಳು ಇನ್ನು ಅನಾಥರಾಗಿ ಉಳಿಯಲಿಲ್ಲ. ಸ್ವಾಮಿ ಅಖಂಡಾನಂದರು ಅವರಿಗೆ 'ಬಾಬಾ (ತಂದೆ)' ಆಗಿದ್ದರು; ಅವರಿಗೆ ಸ್ವಂತ ತಂದೆ ತಾಯಿಗಳಿಗಿಂತಲೂ ಹೆಚ್ಚಾಗಿದ್ದರು.

## ಸಾರ್ಗಾಚಿಯ ಸೇವಾಕ್ಷೇತ್ರ

ಸೇವಾಕಾರ್ಯಗಳು ಹೆಚ್ಚುತ್ತಿದ್ದಂತೆ ಒಂದು ಶಾಶ್ವತ ಕೇಂದ್ರವನ್ನು ತೆರೆಯುವುದಕ್ಕೆ ಸ್ವಾಮಿ ಅಖಂಡಾನಂದರು ಸಾರ್ಗಾಚಿ ಎಂಬಲ್ಲಿ ಜಮೀನನ್ನು ಕೊಂಡುಕೊಂಡರು. ಮರಗಿಡಗಳನ್ನು ನೆಟ್ಟು ತಾವು ನಡೆಸುತ್ತಿದ್ದ ವಿವಿಧ ಸೇವೆಗಳನ್ನು ಇಲ್ಲಿ ಮುಂದುವರಿಸಿದರು. ಬೋಧನಶಾಲೆ, ಕೃಷಿ, ವೃತ್ತಿಪರ ತರಬೇತಿ, ಚಿಕಿತ್ಸಾ ಕೇಂದ್ರ, ಗ್ರಂಥಾಲಯ ಮುಂತಾದ ವಿಭಾಗಗಳು ಆರಂಭವಾದುವು. ಅವರು ತಮ್ಮ ಜೀವನದ ಕಡೆಯವರೆಗೂ ಸಾರ್ಗಾಚಿ ಮತ್ತು ಮಹುಲಗಳಲ್ಲಿ ಕಾರ್ಯನಿರತರಾಗಿಯೇ ಕಳೆದರು. ದೇಹತ್ಯಾಗದ ಕೆಲವು ದಿನಗಳ ಹಿಂದೆ ಮಾತ್ರ ಬೇಲೂರು ಮಠಕ್ಕೆ ಹೋಗಿ, ಅಲ್ಲಿಯೇ ಮಹಾಸಮಾಧಿಯನ್ನು ಹೊಂದಿದರು.

## ಜ್ವಲಂತ ಉದಾಹರಣೆ

ಸ್ವಾಮಿ ಅಖಂಡಾನಂದರು ಹೇಗೆ ಜೀವರಲ್ಲಿ ಶಿವನನ್ನು ಕಾಣುತ್ತಿದ್ದರೆಂಬುದನ್ನು ಸೂಚಿಸುವ ಒಂದು ಘಟನೆಯನ್ನು ಇಲ್ಲಿ ನಾವು ನೆನಪಿಸಿಕೊಳ್ಳಬಹುದು. ಸಾರ್ಗಾಚಿಯಲ್ಲಿ ವಿಜಯದಶಮಿಯ ದಿನದಂದು ಸಾಯಂಕಾಲ, ಊರಿನ ಜನರೆಲ್ಲ ದೇವಿಗೆ ಮತ್ತು 'ಬಾಬಾ'ಗೆ ಪ್ರಣಾಮವನ್ನು ಸಲ್ಲಿಸಲು ಬಂದಿದ್ದರು. ದೇವರಿಗೆ ನೈವೇದ್ಯವನ್ನು ಅರ್ಪಿಸಲಾಗುತ್ತಿತ್ತು. ಆದ್ದರಿಂದ ಅಖಂಡಾನಂದರು ಪ್ರಸಾದವನ್ನು ಸ್ವೀಕರಿಸುವುದಕ್ಕಾಗಿ ಸ್ವಲ್ಪ ಕಾಯಬೇಕಾಯಿತು. ಹಾಗೆ ವಿಳಂಬವಾಗುತ್ತಿರುವುದನ್ನು ನೋಡಿ ಒಬ್ಬ ಹುಡುಗನನ್ನು ಅವರು ದೇವರ ಮನೆಗೆ ಕಳುಹಿಸಿದರು. ಪೂಜಾರಿ ಈಗ ನೈವೇದ್ಯಕ್ಕೆ ನೀರನ್ನು ಚಿಮುಕಿಸುತ್ತಿದ್ದಾರೆಂದು ಅವನು ಬಂದು ತಿಳಿಸಿದ. ಸ್ವಾಮಿ ಅಖಂಡಾನಂದರು ಮತ್ತೆ ಸ್ವಲ್ಪ ಕಾದು, ಮತ್ತೊಮ್ಮೆ ಆತನನ್ನು ಕಳುಹಿಸಿದರು. ನೈವೇದ್ಯವನ್ನು ದೇವರ ಮುಂದಿಟ್ಟು ಪೂಜಾರಿ ಈಗ ಧ್ಯಾನವನ್ನು ಮಾಡುತ್ತಿದ್ದಾರೆಂದು ಅವನು ಬಂದು ಹೇಳಿದ. ವಿಧಿವತ್ತಾದ ಪೂಜೆಯಲ್ಲಿ ಈ ರೀತಿ ಮಾಡುವುದು ಸಾಧಾರಣ ನಿಯಮ. ಅದನ್ನು ಮಾಡದಿದ್ದರೆ ಅಪರಾಧವಾಗುತ್ತದೆ. ಆದರೆ ಸ್ವಾಮಿ ಅಖಂಡಾನಂದರಿಗೆ ಇನ್ನು ತಡೆಯಲಾಗಲಿಲ್ಲ. ತಕ್ಷಣವೇ ಹೋಗಿ ನೈವೇದ್ಯದ ತಟ್ಟೆಯನ್ನು ತೆಗೆದುಕೊಂಡು ಬರುವಂತೆ ಹೇಳಿದರು. ಆ ಹುಡುಗ ಅದೇ ರೀತಿ ಮಾಡಿದ. ಅವರು ಹೇಳಿದರು, "ಅವನು ಯಾರಿಗೆ ನೈವೇದ್ಯವನ್ನು ಅರ್ಪಿಸುತ್ತಿದ್ದಾನೆ? ಶ್ರೀರಾಮಕೃಷ್ಣರೇ ನನ್ನೆದುರಿಗೆ ಈ ಜನರ ರೂಪದಲ್ಲಿ ಕುಳಿತಿದ್ದಾರೆ. ನಾನು ಅದನ್ನು ಸ್ಪಷ್ಟವಾಗಿ ಕಾಣುತ್ತಾ ಇದ್ದೇನೆ." ಹೀಗೆಂದು ನೈವೇದ್ಯವನ್ನೆಲ್ಲ ಜನರಿಗೆ ಹಂಚಿದರು. ಈ ರೀತಿ ಅಲ್ಲಿದ್ದ ಬಡಜನರಲ್ಲಿ ಕೂಡ ಭಗವಂತನನ್ನು ಅಖಂಡಾನಂದರು ಕಂಡದ್ದನ್ನು ನೋಡಿ ಆ ಹುಡುಗ ಆಶ್ಚರ್ಯಚಕಿತನಾದ.

## ದಿವ್ಯಭಾವದ ಸುಪ್ತ ತಾಣ

ಕಾಡಿನ ವೇದಾಂತವು ಅನುಷ್ಠಾನ ವೇದಾಂತವಾಗಿ ಪರಿವರ್ತಿತವಾಗಲು ಸಾಧ್ಯ ಎಂಬುದಕ್ಕೆ ಸ್ವಾಮಿ ಅಖಂಡಾನಂದರು ಉಜ್ವಲ ಆದರ್ಶವಾಗಿದ್ದಾರೆ. ಅವರು ತೋರಿಸಿದ ಮಾರ್ಗವನ್ನು ಈಗಲೂ ರಾಮಕೃಷ್ಣ ಮಹಾಸಂಘವು ಅನುಸರಿಸುತ್ತಿದೆ. ಮಾನವಸೇವೆಯನ್ನು ಬೃಹತ್ ಪ್ರಮಾಣದಲ್ಲಿ ನಡೆಸುವುದಕ್ಕೆ ಪ್ರೇರಣೆಯ ಕಿಡಿಗಳು ಅಖಂಡಾನಂದರ ಸೇವಾಕ್ಷೇತ್ರದಿಂದಲೇ ಹೊರಬಂದವು ಎನ್ನಬಹುದು. ರಾಮಕೃಷ್ಣ ಸಂಘದ ಈ ಆದರ್ಶವನ್ನು ಆಧಾರವಾಗಿಟ್ಟುಕೊಂಡು, ಸಹಸ್ರಾರು ನಿಸ್ವಾರ್ಥ ವ್ಯಕ್ತಿಗಳು ಹಾಗೂ ಸಂಘಸಂಸ್ಥೆಗಳು ಅನೇಕ ರೀತಿಯ ಸೇವಾ ಕಾರ್ಯಗಳನ್ನು ನಡೆಸುತ್ತಿವೆ. ದೇಶೋದ್ಧಾರದ ಈ ಕಾರ್ಯಕ್ಕೆ ಸ್ವಾಮಿ ಅಖಂಡಾನಂದರ ಜೀವನ ಮತ್ತು ಕಾರ್ಯಗಳೇ ಅಡಿಪಾಯವಾಗಿವೆ. ಎಲೆಮರೆಯ ಹೂವಿನಂತೆ ಸೇವೆಯ ಸುಗಂಧವನ್ನು ಇಡೀ ದೇಶಕ್ಕೆ ಹರಡಿದ ಮಹಾತ್ಮರು ಸ್ವಾಮಿ ಅಖಂಡಾನಂದರು. ಇದಕ್ಕಾಗಿ ಭಾರತದ ಕೋಟಿ ಕೋಟಿ ಜನರು ಅವರಿಗೆ ಚಿರಋಣಿಗಳಾಗಿರಬೇಕು.

ಸ್ವಾಮಿ ಅಖಂಡಾನಂದರ ಪತ್ರವೊಂದರಲ್ಲಿ ಅವರ ಆಂತರಿಕ ದಿವ್ಯಭಾವ ಪ್ರಕಟವಾಗುತ್ತದೆ. ಅದೇ ನಮಗೆಲ್ಲರಿಗೂ ಆದರ್ಶ.

"ಮೊದಲು ಹಿಮಾಲಯಕ್ಕೆ ಹೋದಾಗ ನಾನು ಬೇರೆಯೇ ಮನುಷ್ಯನಾಗಿದ್ದೆ. ಈಗ ನನ್ನನ್ನು ನೋಡಿ ನಾನೇ ಅಚ್ಚರಿಪಡುತ್ತಿದ್ದೇನೆ. ಆಗ ನಾನು ಮನುಷ್ಯರನ್ನು ನೋಡುವುದನ್ನೇ ತಪ್ಪಿಸಿಕೊಳ್ಳುತ್ತಿದ್ದೆ; ಹಳ್ಳಿಯನ್ನು ಬಿಟ್ಟು ಕ್ರೂರ ಮೃಗಗಳಿಂದ ಕೂಡಿದ ಹಿಮಾಲಯದ ಕಾಡುಗಳಲ್ಲಿರುವ ಗುಹೆಗಳಲ್ಲಿ ವಾಸಿಸಲು ಇಷ್ಟಪಡುತ್ತಿದ್ದೆ. ಈ ರೀತಿಯಲ್ಲೇ ಕೆಲವು ವರ್ಷಗಳನ್ನು ಕಳೆದೆ. ಈಗ ನಾನು ಮನುಷ್ಯರಲ್ಲೇ ದೇವರನ್ನು ಕಾಣುತ್ತಿರುವೆ; ಮನುಷ್ಯನಿಗೆ ಮಾಡುವ ಸೇವೆಯೇ ದೇವರ ಆರಾಧನೆಯೆಂದು ನನಗೆ ಈಗ ಮನದಟ್ಟಾಗಿದೆ. ದೇವರೇ ಬಂದು ನನ್ನ ಕಿವಿಯಲ್ಲಿ, 'ಇವರೇ ವೇದಕಾಲದ ಋಷಿಗಳಾಗಿದ್ದವರು; ಇವರೇ ರಾಮಕೃಷ್ಣ ಮೊದಲಾದ ಅವತಾರಗಳಾಗಿದ್ದವರು; ಇವರೇ ಎಲ್ಲವೂ' ಎಂದು ಪಿಸುಗುಡುತ್ತಿರುವಂತೆ ಇದೆ."

**ಧನ್ಯ ಸ್ವಾಮಿ ಅಖಂಡಾನಂದ !**